**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ,**
**ಶೋರಾಪುರ.**
**ಸಿ.ಸಿ. ನಂ.1526/2023**

| | | |
|---|---|---|
| ಸಾಕ್ಷಿದಾರರ ಹೆಸರು | ಃ ಪರಶುರಾಮ | ಚಾಸಾ ಃ 05 |
| ತಂದೆ ಹೆಸರು | ಃ ಹಣಮಂತ್ರಾಯ | ಪ್ರಾಸಾ ಃ 03 |
| ವಯಸ್ಸು | ಃ 25 ವರ್ಷ | |
| ವೃತ್ತಿ | ಃ ವ್ಯವಸಾಯ | |
| ವಾಸ ಸ್ಥಳ | ಃ ಮಂಗಳೂರು | |

**ಸಾಕ್ಷಿಗೆ ಇಂದು ದಿನಾಂಕಃ 09.03.2026 ರಂದು ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸ.ಸ.ಅ.ರವರಿಂದಃ**

ಚಾಸಾ-1, 4 ನನ್ನ ಅತ್ತಿಗೆ ಆಗಬೇಕು. ಆರೋಪಿತರು ನನಗೆ ಸಂಬಂಧಿಕರು ಆಗಬೇಕು. ಮೊದಲು ಆರೋಪಿತರಿಗೂ ಮತ್ತು ನಮಗೂ ಜಮೀನಿನ ವಿಚಾರವಾಗಿ ಗಲಾಟೆ ಆಗಿರುತ್ತದೆ. ದಿನಾಂಕ 20-06-2023 ರಂದು ಸಾಯಂಕಾಲ 6 ಗಂಟೆ ಸುಮಾರಿಗೆ ನಾನು, ಚಾಸಾ-1 ಮತ್ತು 4 ರವರು ಮನೆಯ ಮುಂದೆ ಇರುವ ರಸ್ತೆಯಲ್ಲಿ ಹೊರಟಿರುವಾಗ ಚಾಸಾ-1 ಮತ್ತು 4 ರವರು 1 ನೇ ಆರೋಪಿಗೆ ನಮ್ಮ ಹೊಲದಲ್ಲಿ ಕುರಿ ಹೋಗಿರುತ್ತವೆ ಅವುಗಳನ್ನು ಕಟ್ಟಿಹಾಕಿ ಅಂತ ಹೇಳಿದಾಗ, ಆಗ 1 ನೇ ಆರೋಪಿ ನಮ್ಮ ಕುರಿಗಳನ್ನು ಕಟ್ಟಿಹಾಕ ಅಂತ ಹೇಳಲು ನೀವು ಯಾರು ಅಂತ ಹೇಳಿದನು. ಆಗ ಚಾಸಾ-1 ರವರು ಕುರಿಗಳನ್ನು ಕಟ್ಟಿಹಾಕದಿದ್ದರೆ ನಮ್ಮ ಜಮೀನು ಹಾಳು ಮಾಡುತ್ತವೆ ಎಂದು ಹೇಳಿರುತ್ತಾರೆ. ಆಗ 1 ನೇ ಆರೋಪಿ ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಚಾಸಾ-1 ರವರ ಕೂದಲು ಹಿಡಿದು ನೆಲಕ್ಕೆ ಕೆಡವಿ ಒದ್ದಿರುತ್ತಾನೆ. 2 ನೇ ಆರೋಪಿತನು ಚಾಸಾ-1 ರವರಿಗೆ ಬಡಿಗೆಯಿಂದ ಬೆನ್ನಿಗೆ ಹೊಡೆದು ಗಾಯಪಡಿಸಿರುತ್ತಾನೆ. ಆಗ ನಾನು ಮತ್ತು ಚಾಸಾ-4 ರವರು ಜಗಳ ಬಿಡಿಸಿರುತ್ತೇವೆ. ಆಗ ಆರೋಪಿತರು ಚಾಸಾ-1 ರವರಿಗೆ ಇದೊಂದು ಸಾರಿ ಉಳಿದಿದ್ದೀರಿ ಇನ್ನೊಂದು ಸಾರಿ ನಮ್ಮ ತಂಟೆಗೆ ಬಂದು ಜೀವಸಹಿತ ಬಿಡುವುದಿಲ್ಲ ಎಂದು ಹೇಳಿರುತ್ತಾರೆ. ನಂತರ ನಾನು ಪೋಲೀಸ ಠಾಣೆಗೆ ಹೋಗಿ ಜಗಳವಾದ ಬಗ್ಗೆ ಹೇಳಿರುತ್ತೇನೆ. ನಾನು ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ (ಈ

ದಿನ ಆರೋಪಿತರು ಗೈರುಹಾಜರು ಇದ್ದು, ಸದರಿಯವರ ಗೈರುಹಾಜರಾತಿ ಮನ್ನಾ ಮಾಡಲು ಅರ್ಜಿಯನ್ನು ಸಲ್ಲಿಸಿದು, ಆರೋಪಿತರ ವಕೀಲರು ಆರೋಪಿತರನ್ನು ಗುರುತಿಸಲು ತಕರಾರು ಮಾಡಿರುವುದಿಲ್ಲ) ನ್ಯಾಯಾಲಯದ ಮುಂದೆ ಇರುವ ಬಡಿಗೆಯನ್ನು ಗುರುತಿಸುತ್ತೇನೆ. ಅದು ಈಗಾಗಲೇ ಎಂ.ಓ 1 ಎಂದು ಗುರುತಾಗಿರುತ್ತದೆ. ನಾನು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ.

**ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ಎಂ.ಎಸ ಎಂ ವಕೀಲರಿಂದಃ**

ನನಗೆ ಓದಲು ಬರೆಯಲು ಬರುತ್ತದೆ. ನಾನು 9 ನೇ ತರಗತಿಯವರೆಗೆ ಓದಿರುತ್ತೇನೆ. ಚಾಸಾ-1 ನನ್ನ ಅಣ್ಣನ ಹೆಂಡತಿ ಅಂದರೆ ಸರಿ. ಚಾಸಾ-4 ಸಹ ನನ್ನ ಅಣ್ಣನ ಹೆಂಡತಿ ಇರುತ್ತಾಳೆ. 1 ನೇ ಆರೋಪಿತನು ಚಾಸಾ-4 ರವರ ಮೇಲೆ ಪ್ರಕರಣ ದಾಖಲಿಸಿರುತ್ತಾನೆ ಎಂದರೆ ಸರಿ. ಸದರಿ ಪ್ರಕರಣದ ಬಗ್ಗೆ ನನಗೆ ಗೊತ್ತಿರುತ್ತದೆ. ಸದರಿ ಪ್ರಕರಣವನ್ನು 1 ನೇ ಆರೋಪಿತನು ಜಮೀನಿಗೆ ಸಂಬಂಧಿಸಿದಂತೆ ಚಾಸಾ-4 ರವರ ಮೇಲೆ ದಾಖಲಿಸಿರುತ್ತಾನೆ. ನಮ್ಮ ಮನೆ ಮತ್ತು ಆರೋಪಿತನ ಮನೆಗಳ ನಡುವೆ ಎರಡು ಮನೆಗಳು ಇರುತ್ತವೆ. ನಾನು ಕೂಲಿ ಕೆಲಸ ಮಾಡುತ್ತೇನೆ. ನಾನು ಬೇರೆ ಊರಿನಲ್ಲಿ ಮತ್ತು ನಮ್ಮ ಹೊಲದಲ್ಲಿ ಕೆಲಸ ಮಾಡುತ್ತೇನೆ. 1 ನೇ ಆರೋಪಿತನು ಚಾಸಾ-4 ರವರ ಮೇಲೆ ಪ್ರಕರಣ ದಾಖಲಿಸುವಾಗ ನಾನು ಊರಿನಲ್ಲಿಯೇ ಇದ್ದೆನು. ಚಾಸಾ-4 ರವರ ಮಗನಿಗೆ 1 ನೇ ಆರೋಪಿತನ ಚಿಕ್ಕಮ್ಮನ ಮಗಳನ್ನು ಕೊಡಬೇಕೆಂದು ಮಾತುಕತೆ ಆಗಿತ್ತು ಎಂದರೆ ಸರಿ. ಸದರಿ ಮಾತುಕತೆ ಆದ ನಂತರ ಜಗಳವಾಗಿ ಮುರಿದು ಬಿದ್ದಿರುತ್ತದೆ ಎಂದರೆ ಸರಿ. ಆ ದ್ವೇಷದ ಕಾರಣ ಚಾಸಾ-1 ರವರು ಆರೋಪಿತರ ಮೇಲೆ ಸುಳ್ಳು ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ಆ ದಿನ ಯಾವುದೇ ಘಟನೆ ಆಗಿಲ್ಲ, ನಾನು ಚಾಸಾ-1 ರವರ ಅಳಿಯ ಆಗಬೇಕಾಗಿದ್ದರಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಏನು ಗೊತ್ತಿಲ್ಲ, ನಾನು ಊರಿಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ಘಟನೆ ಆಗದೇ ಇದ್ದರೂ ಸಹಿತ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅರೋಪಿತರು ಚಾಸಾ-1 ರವರಿಗೆ ಯಾವುದೇ ಹೊಡಿಬಡಿ ಮಾಡಿರುವುದಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಮತ್ತು ಬಡಿಗೆಯಿಂದ ಹಾಗೂ ಕೈಯಿಂದ ಹೊಡೆದಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿತನು ಚಾಸಾ-4 ರವರ ಮೇಲೆ ಮೊದಲು ಪರಕರಣ ದಾಖಲಿಸಿದ್ದನು ನಂತರ ಚಾಸಾ-4 ರವರು ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಮುಂದೆ ರಾಜೀ

ಆಗಬೇಕಾಗುತ್ತದೆ ಎನ್ನುವ ಉದ್ದೇಶದಿಂದ ನಾವು ಆರೋಪಿತರ ಮೇಲೆ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ** ಇಲ್ಲ.

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.